

ನಾವು ಕಸವೆಂದು ಎಸೆಯುವ ವಸ್ತುಗಳು ಸೃಜನಶೀಲ ಮನಸ್ಸುಳ್ಳ ಕಲಾವಿದರ ಕೈಗೆ ಸಿಕ್ಕಿದರೆ ಅದು ರಸವಾಗಿ ಅರಳುತ್ತದೆ. ನಿರುಪಯುಕ್ತ ವಸ್ತುಗಳು ನಾನಾ ರೂಪದ ಸುಂದರ ಕಲಾಕೃತಿಗಳಾಗಿ ಅರಳಿ ಗೋಡೆ, ಮನೆಯ ಒಳಾಂಗಣ ಅಲಂಕಾರಕ್ಕೆ ಉಪಯೋಗವಾಗುತ್ತದೆ. ಸದ್ಯ ಬೆಂಗಳೂರಿನಲ್ಲಿರುವ ಅನುಪಮಾ ಕಸವನ್ನು ರಸವಾಗಿಸುವ ಕೌಶಲ, ಕ್ರಿಯಾಶೀಲ ಮನಸ್ಸುಳ್ಳ ಮಹಿಳೆ.

ಅನುಪಮಾ ಕೇರಳದ ಗಡಿ ಪ್ರದೇಶವಾದ ಕಾಟುಕುಕ್ಕೆ ಎಂಬ ಹಳ್ಳಿಯಲ್ಲಿ ಹುಟ್ಟಿದವರು. ಅವರ ತಂದೆ ಗೋಪಾಲಕೃಷ್ಣ ಭಟ್ಟರು ಒಬ್ಬ ಹೆಸರಾಂತ ಕಾಷ್ಠ ಕಲೆಯ ಕಲಾವಿದ. ಮರದ ಬೇರುಗಳಿಂದ ವೈವಿಧ್ಯಮಯ ಕಲಾರಾಶಿಯನ್ನೇ ಕೆತ್ತಿದವರು. ವ್ಯಂಗ್ಯ ಚಿತ್ರಕಾರರಾಗಿ ಕನ್ನಡ ಮತ್ತು ಆಂಗ್ಲ ಪತ್ರಿಕೆಗಳಲ್ಲಿ ಕಾಣಿಸಿಕೊಂಡವರು. ಹೀಗಾಗಿ ಅನುಪಮಾ ಹುಟ್ಟಿನಿಂದಲೇ ಕಲೆಯ ಆಸಕ್ತಿ ಬೆಳೆಸಿಕೊಂಡಿದ್ದರು. ಗಣೇಶ ಪ್ರಸಾದ್ ಅವರ ಮಡದಿಯಾಗಿ ಬೆಂಗಳೂರು ಸೇರಿದ ಬಳಿಕ ಅವರ ಕಲೆಯ ಆಯಾಮಗಳಿಗೆ ಹೊಸ ರೂಪ, ಹೊಸ ವೇಷಗಳನ್ನು ತೊಡಿಸಲು ಅವಕಾಶವಾಯಿತು.

ಬೆಂಗಳೂರಿನ ಬಿಟಿಎಂ ಲೇಔಟ್‌ನ ಸನಿಹದಲ್ಲಿರುವ ಅನುಗ್ರಹ ಲೇಔಟ್‌ನಲ್ಲಿದೆ 'ಅನುರೂಪಿಕಾ' ಎಂಬ ಅನುಪಮಾ ಮನೆ. ಇದು ಒಂದು ಕಲಾ ಕೇಂದ್ರವಾಗಿ ಶೋಭಿಸುತ್ತಿದ್ದು ಅವರ ಬಗೆಬಗೆಯ ಕಲಾಕೃತಿಗಳನ್ನು ದರ್ಶನ ಮಾಡಿಸುತ್ತಿದೆ. ಅದರಲ್ಲಿ ಮುಖ್ಯವಾಗಿರುವುದು ಸೆರಾಮಿಕ್ ಕೃತಿಗಳು. ಈ ಮೂಲಕ ಆಧ್ಯಾತ್ಮಿಕ ತತ್ವಗಳನ್ನು ಪ್ರತಿಬಿಂಬಿಸುವ ಮ್ಯೂರಲ್ ಪೈಂಟಿಂಗ್ ಕೃತಿಗಳು ಕಿರಿದರಲ್ಲಿ ಹಿರಿಯ ಅರ್ಥವನ್ನು ಕೊಡುತ್ತವೆ. ಆಧುನಿಕತೆಯ ಹೊರಾವರಣದಲ್ಲಿ ವೇದ ಮಂತ್ರಗಳ ಗೂಢಾರ್ಥವನ್ನು ಹೂರಣವಾಗಿ ತುಂಬಿಕೊಂಡ ಇವರ ಈ ಕೃತಿಗಳು ವಿಮರ್ಶಕರಿಂದ ಮೆಚ್ಚುಗೆ ಗಳಿಸಿವೆ. ಸೆರಾಮಿಕ್ ಪುಡಿ ಮತ್ತು ಫೆವಿಕಾಲ್‌ಗಳನ್ನು ಮಿಶ್ರ ಮಾಡಿ ಪ್ಲೈವುಡ್ ಹಲಗೆಯ ಮೇಲೆ ಇದರಿಂದ ಈ ಕೃತಿಗಳು ಮೈದಳೆದು ಬಣ್ಣ ತುಂಬಿಕೊಳ್ಳುತ್ತವೆ. ಒಂದು ಕಲಾಕೃತಿ ಮೂಡಿ ಬರಲು ಕನಿಷ್ಠ ಇಪ್ಪತ್ತೈದು ದಿನ ಬೇಕಾಗಿದ್ದರೂ ನೂರಾರು ಕೃತಿಗಳು ಅವರ ಬೆರಳುಗಳಿಂದ ಅರಳಿವೆ.

ಇನ್ನು ಅನುಪಮಾ ಕೈಯಲ್ಲಿ ನಾವು ಕಸವೆಂದುಕೊಂಡ ವಸ್ತುಗಳೆಲ್ಲವೂ ಒಂದು ಕಲಾಕೃತಿಯಾಗಿ ಹೊಸ ಜನ್ಮ ಪಡೆಯುತ್ತವೆ. ಪಿವಿಸಿ ಪೈಪ್ ತುಂಡು, ಮರ, ಬಿದಿರು, ಪಿಸ್ತಾದ ಸಿಪ್ಪೆ, ಶಂಖ, ಕಪ್ಪೆಚಿಪ್ಪು ಏನೇ ಕೊಟ್ಟರೂ ಅಷ್ಟನ್ನೂ ಕಲೆಯ ಸುಂದರ ರೂಪವಾಗಿ ಬದಲಾಯಿಸಬಲ್ಲರು. ಆಕ್ರಲಿಕ್, ಫ್ಯಾಬ್ರಿಕ್ ಬಣ್ಣದ ಕಲೆಯಲ್ಲಿಯೂ ನಿಪುಣೆ. ಪಾಟ್ ಪೈಂಟಿಂಗ್ ಮತ್ತು ತೈಲ ವರ್ಣದಲ್ಲಿಯೂ ಮನೋಜ್ಞವಾದ ಸಾಲು ಸಾಲು ಕೃತಿಗಳನ್ನು ಸೃಷ್ಟಿಸಿದ್ದಾರೆ. ಮಕ್ಕಳು ಮತ್ತು ಹಿರಿಯರಿಗಾಗಿ ಅವರು ಬೆಂಗಳೂರಿನಲ್ಲಿ ಚಿತ್ರಕಲಾ ರಚನೆಯ ಶಿಬಿರಗಳನ್ನೂ ನಡೆಸುತ್ತಾರೆ.

ಅನುಪಮಾ ಶಾಲೆಯಲ್ಲಿ ಕಲಿಯುವಾಗಲೇ ತನ್ನ ಕಲಾ ರಚನೆಗಳಿಗೆ ಬಹುಮಾನಗಳನ್ನು ಪಡೆಯುತ್ತಿದ್ದರು. ಎಂಕಾಂನಲ್ಲಿ ಹತ್ತನೆಯ ರ‍್ಯಾಂಕ್ ಗಳಿಸಿದ್ದಾರೆ. ವಿವಾಹವಾದ ಮೇಲೆ ಕಲಾಗುರುಗಳಾದ ಶೈಲಾ ಪ್ರಸಾದ್ ಮತ್ತು ಮುನಿಯಪ್ಪ ಪಿಲ್ಲಪ್ಪ ಅವರಿಂದ ತನ್ನ ಕಲಾಸಾಧನೆಗೆ ಬೇಕಾದ ಶಿಕ್ಷಣವನ್ನು ಪಡೆಯುವ ಮೂಲಕ ಒಬ್ಬ ಪರಿಪೂರ್ಣ ಕಲಾವಿದೆಯಾಗಲು ಸಾಧ್ಯವಾಯಿತು. ಸಮೀಪ ಸಂಬಂಧಿ ಗಿಲಿಗಿಲಿ ಮ್ಯಾಜಿಕ್ ಖ್ಯಾತಿಯ ಪ್ರೊ. ಶಂಕರ್ ಅವರ ಜಾದೂ ತಂಡದಲ್ಲಿ ಅವರು ಏಳು ವರ್ಷಗಳ ಕಾಲ ಒಬ್ಬ ಸದಸ್ಯೆಯೂ ಆಗಿದ್ದರು. ಅನುಪಮಾ ಕಲಾಕೃತಿಗಳ ಪ್ರದರ್ಶನ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಲವಾರು ಕಡೆ ನಡೆದಿವೆ. ಪೀಪಲ್ಸ್ ಆರ್ಟ್ ಫೌಂಡೇಷನ್ ನಡೆಸಿದ ಮಹಿಳಾ ಕಲಾವಿದರ ರಾಷ್ಟ್ರಮಟ್ಟದ ಪ್ರದರ್ಶನದಲ್ಲಿ ಅವರ ಕೃತಿಗಳಿಗೆ ಅತ್ಯುನ್ನತ ಗೌರವವೂ ಪ್ರಾಪ್ತವಾಗಿದೆ. ಕಿಂಗ್ ಫಿಷರ್ ಮೊದಲಾದ ಸಂಸ್ಥೆಗಳು ಅನುಪಮಾ ಕಲಾ ಪ್ರದರ್ಶನದ ಪ್ರಾಯೋಜಕತ್ವ ವಹಿಸಿದ ಸಂದರ್ಭಗಳಿವೆ.



### ಪ್ರಶಸ್ತಿ-ಪುರಸ್ಕಾರ

ಎಳೆಯ ವಯಸಸಿನಲ್ಲೇ ತನ್ನ ಸಾಧನೆಗಳಿಗಾಗಿ ಅನುಪಮಾ ಗಳಿಸಿದ ಪ್ರಶಸ್ತಿ ಪುರಸ್ಕಾರಗಳು ಹಲವು. ನವ ಬೆಂಗಳೂರು ಕ್ಲಬ್ 2018ರ `ಕಲಾ ಸಂಭ್ರಮ' ಎಂಬ ವಿಶೇಷ ಗೌರವ ಪ್ರಶಸ್ತಿ ನೀಡಿ ಸನ್ಮಾನಿಸಿದೆ. ಕಾರ್ತಿಕೇಯ ಚಾರಿಟೇಬಲ್ ಟ್ರಸ್ಟ್ `ನಮ್ಮೂರ ಸಾಧಕಿ' ಪ್ರಶಸ್ತಿ ನೀಡಿದೆ. ಅಖಿಲ ಕರ್ನಾಟಕ ಚಳವಳಿ ಕೇಂದ್ರದ `ಪರಮೇಶ್ವರ ಪುಲಕೇಶಿ' ಪ್ರಶಸ್ತಿ, ಪುತ್ತೂರಿನ ಸಾಹಿತ್ಯ ವೇದಿಕೆಯ 201819ರ ಸಾಹಿತ್ಯ ಸಂಭ್ರಮದ `ಕಲಾಸಿರಿ' ಪ್ರಶಸ್ತಿಗಳು ಈ ಕುಂಚದ ಬೆಡಗಿಗೆ ಸಂದಿವೆ. ಪುತ್ರಿ ಆಕಾಂಕ್ಷಾಳನ್ನೂ ಒಬ್ಬ ಕಲಾವಿದೆಯಾಗಿ ಬೆಳೆಸುತ್ತಿದ್ದಾರೆ. ಅನುಪಮಾ ಅವರ ಆಧ್ಯಾತ್ಮಿಕ ಮತ್ತಿತರ ಕಲಾರಚನೆಗಳಿಗೆ ಅಪಾರ ಬೇಡಿಕೆಯೂ ಇದೆ.